ಕರ್ನಾಟಕದ ಬೆಂಗಳೂರು ನಗರದಲ್ಲಿರತಕ್ಕದ್ದು. ಇಲ್ಲಿನ ಮಣ್ಣಿನ ಮಕ್ಕಳಿಗೆ ಉದ್ಯೋಗವಿಲ್ಲ, ಕನ್ನಡಿಗರಿಗೆ ಉದ್ಯೋಗವಿಲ್ಲ. ಸರ್ವಭಾಷೆಯವರು ನಗರದಲ್ಲಿದ್ದಾರೆ. ಇದರ ಬಗ್ಗೆ ನೀವು ಪ್ರಾಮಾಣಿಕ ಚಿಂತನೆ ಏನು ಮಾಡುತ್ತೀರಿ ಎಂದು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ :— ಮಾನ್ಯ ಅಧ್ಯಕ್ಷರೆ, ಅನ್ಯಭಾಷೆಯವರು ಅತ್ಯಂತ ದೊಡ್ಡ ಪ್ರಮಾಣದಲ್ಲಿ ಬೆಂಗಳೂರು ನಗರದಲ್ಲಿ ಬದುಕುತ್ತಿದ್ದಾರೆಂಬುದು ಹೆಮ್ಮೆಪಡುವಂತಹ ಸಂಗತಿ. ಬೇಕಾದ ಇತರೆ ಸವಲತ್ತುಗಳನ್ನು ಕೊಡೋಣ. ಪ್ರಮುಖವಾಗಿ ಇಲ್ಲಿರತಕ್ಕ ಕನ್ನಡಿಗರು ಅದು ಉದ್ಯೋಗದಲ್ಲಿರಬಹುದು ಬೇರೆ ಯಾವುದೇ ಇರಬಹುದು ಅವರಿಗೆ ಯಾವುದೇ ಆದ್ಯತೆ ಸಿಗದೆ ಅವಕಾಶಗಳು ಸಿಗದೆ ಬೀದಿ ಪಾಲಾಗುತ್ತಿದ್ದಾರೆ. ಸರ್ಕಾರ ಸಮಗ್ರವಾಗಿ ಯೋಚನೆ ಮಾಡಿ ಕನ್ನಡಿಗರು ನೆಮ್ಮದಿಯಿಂದ ಬದುಕುವುದಕ್ಕೆ ಏನಾದರೂ ಕಾರ್ಯಕ್ರಮ ರೂಪಿಸುತ್ತದೆಯೇ ಆ ಚಿಂತನೆಯಲ್ಲಿ ಸರ್ಕಾರ ಇದೆಯೇ?

ಶ್ರೀ ಜೆ.ಹೆಚ್. ಪಟೇಲ್ :— ಅದರ ಬಗ್ಗೆ ಚರ್ಚೆ ಮಾಡೋಣ. ಅವರ ಅಭಿಪ್ರಾಯ ನನಗೆ ಸಹಮತಿ ಇದೆ. ಹೇಗೆ ಬಗೆಹರಿಸಬೇಕು ಅದು ಅಷ್ಟು ಸುಲಭವಲ್ಲ. ಚರ್ಚೆ ಮಾಡೋಣ.

ಶ್ರೀ ವಾಟಾಳ್ ನಾಗರಾಜ್ :— ಮಾನ್ಯ ಅಧ್ಯಕ್ಷರೆ, ಬೆಂಗಳೂರು ಕನ್ನಡಿಗರಿಗಾಗಿ ಉಳಿದಿಲ್ಲ. ಆ ಪರಿಸ್ಥಿತಿಯನ್ನು ದಾಟುತ್ತಿದ್ದೇವೆ. ನಾವು ವೇದಿಕೆಯ ಮೇಲೆ ಹೊರಗಡೆ ಭಾಷಣ ಮಾಡುತ್ತೇವೆ. ಕನ್ನಡಿಗರನ್ನು ಉದ್ಧಾರ ಮಾಡಬೇಕೆಂದು ಹೇಳುತ್ತೇವೆ. ಆದರೆ ಇದರ ಬಗ್ಗೆ ಪ್ರಮಾಣಿಕವಾದ ಚಿಂತನೆಯಿಲ್ಲ. ನಿಮಗೆ ಈ ಬಗ್ಗೆ ಕಳಕಳಿಯಿಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತಿನ ಪರಿಸ್ಥಿತಿಯಲ್ಲಿ ಇದು ಕಣ್ಣೀರಿನ ಕತೆ. ಬೆಂಗಳೂರಿನ ಜನತೆಗೆ ಇದು ಕಣ್ಣೀರಿನ ಕತೆಯಾಗಿದೆ. ಸರ್ಕಾರ ಇದರಲ್ಲಿ ವಿಫಲವಾಗಿದೆ. ಅದಕ್ಕಾಗಿ ನಾನು ಸಭಾತ್ಯಾಗ ಮಾಡುತ್ತೇನೆ. ಬಹಳ ನೋವಿನಿಂದ ಹೋಗುತ್ತಿದ್ದೇನೆ. ಕನ್ನಡಿಗರನ್ನು ಉಳಿಸುವುದಕ್ಕೆ ಯಾವುದೇ ಪ್ರಯತ್ನ ಮಾಡುತ್ತಿಲ್ಲವೆಂದು ಬಹಳ ನೋವಿನಿಂದ ನಾನು ಸಭೆಯಿಂದ ಹೊರಗೆ ಹೋಗುತ್ತಿದ್ದೇನೆ. ತಾವು ಏನು ಬೇಕಾದರೂ ತಿಳಿದುಕೊಳ್ಳಿ.

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಜೆ.ಹೆಚ್. ಪಟೇಲ್ :— ಮಾನ್ಯ ಸದಸ್ಯರು ವಾಕ್‌ಔಟ್ ಮಾಡುವುದರಿಂದ ಕನ್ನಡಿಗರಿಗೆ ಒಳ್ಳೆಯದಾಗುವುದಾದರೇ ಆಗಲಿ.